# ಮನನ–ಮಾನ್ಯ

## ಭಯದಿಂದ ನಿರ್ಭಯಕ್ಕೆ

– ಮಧುಪ

ಮನುಷ್ಯರಲ್ಲಿ ಹೆಚ್ಚಿನ ಜನ ಒಂದಲ್ಲ ಒಂದು ತೆರನಾದ ಭಯದಿಂದ ಪೀಡಿತರಾಗಿರುತ್ತಾರೆ. ಮಗುವಾಗಿರುವಾಗ ಅನಿರೀಕ್ಷಿತ ದೊಡ್ಡ ಸದ್ದು, ಸಮತೋಲ (ಜೋಲಿ) ತಪ್ಪುವ ಅನುಭವ ಭಯಕ್ಕೆ ಕಾರಣ. ಇದು ಸಹಜ ಪ್ರವೃತ್ತಿ. ಅನಂತರ ಗುಮ್ಮ, ಪೊಲಿಸು, ದೊಡ್ಡವರ ಭಯ. ಬೆಳೆಯುತ್ತ ಶಿಕ್ಷೆಯ ಭಯ, ರೋಗಗಳ ಭಯ, ವಿಷಜಂತುಗಳ ಭಯ, ಭೂತ ಪ್ರೇತ ಪಿಶಾಚಿಗಳ ಭಯ, ಮಾಟ ಮದ್ದುಗಳ ಭಯ, ಬಡತನ–ದೈನ್ಯಾವಸ್ಥೆಗಳ ಭಯ, ಕಳ್ಳರ ಭಯ, ಏನನ್ನಾದರೂ ಕಳೆದುಕೊಳ್ಳುವ ಭಯ, ಸಾವಿನ ಭಯ ಇತ್ಯಾದಿ ನಾನಾ ತೆರನಾದ ಭಯಗಳಿವೆ. ಮೂಢ ನಂಬಿಕೆಗಳು ಇರುವವರಿಗೆ ಗ್ರಹಗತಿಗಳ ಭಯವೂ ಇದೆ.

ಭಯ ನಮ್ಮನ್ನು ಆವರಿಸಿದಾಗ ಎದೆ ಬಡಿತ ಹೆಚ್ಚುತ್ತದೆ, ಮೈನಡುಗುತ್ತದೆ, ಬೆವರುತ್ತದೆ. ಭಯ ನಮ್ಮ ವಿಚಾರಶಕ್ತಿಯನ್ನು ಮೊಟಕುಗೊಳಿಸುತ್ತದೆ. ಏನು ಮಾಡಬೇಕು ಎಂದೇ ತೋಚುವುದಿಲ್ಲ. ದೈಹಿಕವಾಗಿಯೂ ಮಾನಸಿಕವಾಗಿಯೂ ಶಕ್ತಿ ಕುಂದುತ್ತದೆ. ಆತ್ಮವಿಶ್ವಾಸ ಹಾರಿಹೋಗುತ್ತದೆ. ನೆನಪಿನ ಶಕ್ತಿಯೂ ಹೋಗುತ್ತದೆ. ನಿದ್ರಾಹೀನತೆ, ಬುದ್ಧಿಭ್ರಮೆ, ರಕ್ತದ ಏರೊತ್ತಡ ಉಂಟಾಗುತ್ತದೆ.

ಭಯಗ್ರಸ್ತರಾದ ಜನ ಮಾಡದ ಪಾತಕಗಳಿಲ್ಲ. ಭಯದಿಂದ ಸಂಶಯ, ಸಂಶಯದಿಂದ ಕೋಪ, ಕೋಪದಿಂದ ಹಿಂಸೆ, ಹಿಂಸೆಯಿಂದ ಸರ್ವನಾಶ. ಶತಮಾನಗಳಿಂದ ರೂಢಿಸಿಕೊಂಡು ಬಂದ ಉದಾತ್ತ ಗುಣಗಳನ್ನು ಭಯ ನಾಶ ಮಾಡಿಬಿಡುತ್ತದೆ. ವಿಚಾರಶಕ್ತಿ ಕಾರ್ಯನಿಷ್ಠೆ ಎರಡೂ ಹಾಳಾಗುತ್ತವೆ. ಮನುಷ್ಯ ಪಶುವಿಗಿಂತ ಕೀಳಾಗಿ ನಡೆದುಕೊಳ್ಳುತ್ತಾನೆ.

ಭಯದ ಮೂಲ ಮನಸ್ಸಿನಲ್ಲಿಯೇ. ಅದನ್ನು ಉಚ್ಚಾಟನೆ ಮಾಡುವ ಶಕ್ತಿಯೂ ಮನಸ್ಸಿನಲ್ಲಿ ಇದೆ. ದೇವರ ಬಗ್ಗೆ ನಿಜವಾಗಿಯೂ ಭಯಪಡಬೇಕಿಲ್ಲ. ಏಕೆಂದರೆ ಅವನು ಪ್ರೇಮಸ್ವರೂಪ. ಕೋಪ, ಪ್ರತೀಕಾರ ಅವನ ಗುಣಗಳೇ ಅಲ್ಲ.

ಆರೋಗ್ಯಕರವಾದ ಭೀತಿ, ಅಂದರೆ ಅಧರ್ಮ, ಅನ್ಯಾಯ ಕೆಡುಕು ಮಾಡಿದರೆ ತನಗೂ ತನ್ನ ಸುತ್ತಮುತ್ತಲವರಿಗೂ ಕೆಟ್ಟದಾಗುತ್ತದೆ, ತನ್ನ ವ್ಯಕ್ತಿತ್ವ ಮೊಟಕಾಗುತ್ತದೆ ಎಂಬ ಪ್ರಜ್ಞೆ–ಎಚ್ಚರಿಕೆ ಇರುವುದು ಒಳ್ಳೆಯದು. ಎಲ್ಲಿ ತಪ್ಪು ಮಾಡುವೆನೊ, ಎಲ್ಲಿ ಸುಳ್ಳು ಹೇಳುವಂತಾಗುವುದೊ, ಎಲ್ಲಿ ನೀತಿ ತಪ್ಪುವೆನೊ, ಎಲ್ಲಿ ಕರ್ತವ್ಯದಲ್ಲಿ ಚ್ಯುತಿ ಆಗುವುದೊ ಎಂಬ ಭಯ ಒಳ್ಳೆಯದು. ಅದು ಮುನ್ನೆಚ್ಚರಿಕೆಯಾಗಿ ನಮ್ಮನ್ನು ಸರಿಯಾದ ದಾರಿಯಲ್ಲಿ ನಡೆಸುವುದು.

ಆದರೆ ಅತಿರಂಜಿತ, ಕಾಲ್ಪನಿಕ, ನಿಷ್ಕಾರಣ, ನಿಷೇಧಾತ್ಮಕ ಭಯ ಇರಬಾರದು. ಅದು ನಮ್ಮ ಸ್ವಾಭಾವಿಕ ಶಕ್ತಿ, ಸಾಮರ್ಥ್ಯ, ಧೈರ್ಯ, ಸ್ಥೈರ್ಯ, ಆತ್ಮವಿಶ್ವಾಸಗಳನ್ನು ಹಾಳುಮಾಡುತ್ತದೆ.

ದೈವಭಕ್ತಿ, ಧರ್ಮಶ್ರದ್ಧೆ, ಸತ್ಯನಿಷ್ಠೆ, ನೀತಿ, ಚಾರಿತ್ರ್ಯಗಳನ್ನಿರಿಸಿಕೊಂಡವರು ಯಾವುದಕ್ಕೂ ಭಯಪಡಬೇಕಾಗಿಲ್ಲ.

– ಮಧುಪ

# ಪ್ರಹಸನ ಪ್ರಸಂಗ

**ಅ**ಮೆರಿಕಕ್ಕೆ ವಲಸೆ ಹೋಗುವವರ ಸಂಖ್ಯೆ ಬೆಳೆಯುತ್ತಲೇ ಇದೆ. ಒಬ್ಬ ವ್ಯಕ್ತಿ ಅಮೆರಿಕಕ್ಕೆ ಹೋಗಲು ಬಯಸಿ ರಾಯಭಾರ ಕಛೇರಿಯಲ್ಲಿ ಅರ್ಜಿ ಸಲ್ಲಿಸಿದ ನಂತರ ಅಧಿಕಾರಿಯ ಬಳಿಗೆ ಬಂದು, ಹಲ್ಲು ಕಿರಿಯುತ್ತ ಮೆಲುದನಿಯಲ್ಲಿ ಗೋಗರೆದ, "ಸರ್, ನನಗೆ ನಿಮ್ಮ ಸುಂದರ ದೇಶಕ್ಕೆ ಪ್ರವೇಶ ಸಿಗುವ ಸಾಧ್ಯತೆ ಇದೆಯೇ?" ಇಂತಹ ಸಾವಿರಾರು ಜನರನ್ನು ಕಂಡಿದ್ದ ಆ ಅಧಿಕಾರಿಯು ಬೇಸತ್ತು, "ಹತ್ತು ವರ್ಷಗಳ ನಂತರ ಬಾ" ಎಂದ ಗಡುಸಾಗಿ. ಬಾಗಿಲ ಬಳಿಗೆ ಮೆಲ್ಲಗೆ ನಡೆಯುತ್ತ, ಹಿಂದಿರುಗಿ ನೋಡುತ್ತಾ ಆತ ಮತ್ತೆ ಕೇಳಿದ, "ಸರ್, ಬೆಳಿಗ್ಗೆ ಬರಬೇಕೋ, ಮಧ್ಯಾಹ್ನವೋ?"

❄❄❄

**ಲಾ**ಯರೊಬ್ಬರ ಬಳಿಗೆ ಬಂದ ಒಬ್ಬ ವ್ಯಕ್ತಿ ವಿವಾಹ ವಿಚ್ಛೇದನಕ್ಕೆ ಸಹಾಯ ಕೋರಿದ. "ಏನು ಸಮಸ್ಯೆ?" ಲಾಯರ್ ಕೇಳಿದ. "ನನ್ನ ಹೆಂಡ್ತಿ ಮೂರು ತಿಂಗಳಿಂದ ನನ್ನೊಂದಿಗೆ ಮಾತಾಡಿಲ್ಲ! ಅದಕ್ಕೇ" ಎಂದ ಆ ವ್ಯಕ್ತಿ. ಲಾಯರ್ ಹೇಳಿದ, "ನಿನ್ನ ಸ್ಥಾನದಲ್ಲಿದಿದ್ದರೆ ನಾನು ಸಂತೋಷಪಡುತ್ತಿದ್ದೆ. ಆತುರ ಪಡಬೇಡ, ಸುಮ್ಮನಿರುವ ಪತ್ನಿಯರು ಈಗಿನ ಕಾಲದಲ್ಲಿ ಸಿಗುವುದೇ ಕಷ್ಟ!"

❄❄❄

**ಕ್ಯಾ.** ನರಸಿಂಹಯ್ಯನವರ ಗ್ರಹಚಾರ! ಹುಟ್ಟುಹಬ್ಬದ ದಿನ. ಮುಂಬಾಗಿಲನ್ನು ಯಾರೋ ಸಣ್ಣಗೆ ತಟ್ಟುತ್ತಿದ್ದಾರೆ. ಬಾಗಿಲು ತೆರೆದು ನೋಡಿದರೆ, ಒಂದು ಬಸವನಹುಳು, ಮುಗುಳ್ನಗುತ್ತ ಹೇಳಿತು, "ಗುಡ್ ಮಾರ್ನಿಂಗ್, ಮೆನಿ ಹ್ಯಾಪಿ ರಿಟರ್ನ್ಸ್ ಆಫ್ ದ ಡೇ." ನಿದ್ದೆಗೆಟ್ಟಿದ್ದ ಕೋಪದಲ್ಲಿ ನರಸಿಂಹಯ್ಯನವರು ಝಾಡಿಸಿ ಒದ್ದರು. ಬಸವನಹುಳು ಹೋಗಿ ರಸ್ತೆ ಮಧ್ಯೆ ಬಿದ್ದುಬಿಟ್ಟಿತು.

ಒಂದು ವರ್ಷ ಕಳೆಯಿತು. ಮತ್ತೊಮ್ಮೆ ನರಸಿಂಹಯ್ಯನವರ ಹುಟ್ಟುಹಬ್ಬ. ಅದೇ ಬಾಗಿಲ ಶಬ್ದ, ಅದೇ ಬಸವನಹುಳು. ಬಾಗಿಲು ತೆರೆದ ನರಸಿಂಹ್ಯನವರಿಗೆ ಕೇಳಿತು: "ಅದ್ಸರಿ, ನೀನು ಹೋದ ವರ್ಷ ನನ್ನನ್ನು ಒದ್ದದ್ದು ಯಾಕೆ?"